**<u>ಸಾಕ್ಷಿಯನ್ನು ದಿನಾಂಕಃ 03.07.2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಬಿ ಆರ್ ಆರ್ ವಕೀಲರಿಂದ:</u>**

ನನ್ನ ಗಂಡನಿಗೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ಕುಟುಂಬದ ಅವಶ್ಯಕತೆಗಾಗಿ ಕೆಲವು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ. ದಾವಾ ಆಸ್ತಿಯನ್ನು ಮಾರಾಟ ಮಾಡಿದ ದಿನವೇ ಸ್ವಾಧೀನವನ್ನು ಪ್ರತಿವಾದಿಗೆ ಬಿಟ್ಟುಕೊಡಲಾಗಿತ್ತು ಎಂದರೆ ಸಾಕ್ಷಿಯು ಆ ವಿಚಾರ ಗೊತ್ತಿದ್ದರೂ ಕೆಣಕಲಿಲ್ಲವೆಂದು ನುಡಿಯುತ್ತಾರೆ. ಸದರಿ ಕ್ರಯಪತ್ರವನ್ನು ನಮ್ಮ ಕುಟುಂಬದ ಅವಶ್ಯಕತೆಗಾಗಿ ಮಾರಾಟ ಮಾಡಿದ್ದ ಕಾರಣ ಅದನ್ನು ಕೆಣಕಲಿಲ್ಲ ಎಂದರೆ ಸರಿ. ಪ್ರತಿವಾದಿಗೆ ಕ್ರಯ ಪತ್ರವಾಗುವ ವೇಳೆಗೆ ನಮಗೆ ಹೌಸಿಂಗ್ ಬೋರ್ಡ್ ನಲ್ಲಿ ಮನೆ ಮಂಜೂರಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು, ಅದಕ್ಕೂ ಕ್ರಯಪತ್ರಕ್ಕೂ ಸಂಬಂಧ ಇಲ್ಲವೆಂದು ನುಡಿಯುತ್ತಾರೆ. ಸದರಿ ಹೌಸಿಂಗ್ ಬೋರ್ಡ್ ನ ಆಸ್ತಿಯನ್ನು ನನ್ನ ಗಂಡ ಮಾರಾಟ ಮಾಡಿದ್ದರು. ಸದರಿ ಆಸ್ತಿಯನ್ನು ಮನೆಯ ನಿರ್ವಹಣೆಗಾಗಿ ಮಾರಾಟ ಮಾಡಿದ್ದರು. ನನ್ನ ಗಂಡ ಕುಟುಂಬದ ಸದ್ದುದೇಶದಿಂದ ಮಾರಾಟ ಮಾಡಿದ ಕಾರಣ ಅವುಗಳನ್ನು ಪ್ರಶ್ನಿಸಿಲ್ಲ ಎಂದರೆ ಸರಿ.

2. 1989ರಲ್ಲಿ ನಾನು ಗೃಹಿಣಿಯಾಗಿದ್ದು, ನನಗೆ ಯಾವುದೇ ಆದಾಯದ ಮೂಲ ಇರಲಿಲ್ಲ ಎಂದರೆ ಸರಿ. ಸದರಿ ವೇಳೆಯಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಲು ನನ್ನ ಗಂಡನ ಆದಾಯವೇ ಮೂಲವಾಗಿತ್ತು. ದಾವಾ ಆಸ್ತಿ ನನ್ನ ಗಂಡನ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯ ಮಾರಾಟದ ಪ್ರತಿಫಲವನ್ನು ಕುಟುಂಬದ ಒಳಿತಿಗಾಗಿ ಬಳಸಲಾಗಿತ್ತು ಎಂದರೆ

ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿ ಮಾರುಕಟ್ಟೆ ಮೌಲ್ಯ ಹೆಚ್ಚಾದ ಕಾರಣ, ಸದರಿ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೇ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡಿದ ವಿಚಾರ ಮಾರಾಟ ಮಾಡಿದ ದಿನವೇ ನನಗೆ ತಿಳಿದಿದ್ದರಿಂದ, ನನ್ನ ದಾವೇ ಕಾಲಪರಿಮಿತಿಯಲ್ಲಿ ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೇ ಹ್ಯಾಜ್ಯ ಕಾರಣ ಇಲ್ಲದ ಕಾರಣ ವಜಾಗೊಂಡರೇ ನನಗೆ ನಷ್ಟವಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಕ್ರಯ ಪತ್ರ ಓದಿದ್ದೀರಾ ಎಂದರೆ ಸಾಕ್ಷಿಯು ಅದು ತನಗೆ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳನ್ನು ಸ್ವಾಧೀನ ಕಸಿದುಕೊಳ್ಳಲು ಸುಳ್ಳು ದಾವೇ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

*( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.